RNU AIR DHARWAD

DECEMBER 21, 2024

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಬೆಳಗಾವಿಯ ಚಳಿಗಾಲದ ಅಧಿವೇಶನ, ಜನಪರವಾಗಿ ಯಶಸ್ವಿ – ವಿಧಾನಸಭಾಧ್ಯಕ್ಷ, ಯು.ಟಿ. ಖಾದರ್, ಅಭಿಮತ.

- ಬೆಳಗಾವಿ ಕಾಂಗ್ರೆಸ್ ಮಹಾಧಿವೇಶನದ ಶತಮಾನೋತ್ಸವ; 27ನೇ ತಾರೀಖು, ಸಂಭ್ರಮದ “ಗಾಂಧಿ ಭಾರತ” ಕಾರ್ಯಕ್ರಮ.

- ಗಾಂಧಿ ಗ್ರಾಮೀಣ ಗುರುಕುಲದಿಂದ, ಅಥಣಿಯ ಆನಿಖಿಂಡಿಯಲ್ಲಿ, ಇಂದು ಮತ್ತು ನಾಳೆ, ಗಾಂಧಿ ಚಿಂತನ ಸಮಾವೇಶ.

- ಕಿತ್ತೂರು ಕರ್ನಾಟಕ, ಸ್ಕೌಟ್ಸ್ ಮತ್ತು ಗೈಡ್ಸ್, ಐದು ದಿನಗಳ ಜಾಂಬೊರೇಟ್, ಧಾರವಾಡದಲ್ಲಿ ಆಯೋಜನೆ.

<><><>

ಈಗ ವಾರ್ತೆಗಳ ವಿವರ

<><><>

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ, 8 ದಿನಗಳ ಕಾಲ ನಡೆದ, ಚಳಿಗಾಲದ ಅಧಿವೇಶನ ಯಶಸ್ವಿಯಾಗಿದೆ; ಜನಪರ ಪ್ರಶ್ನೆಗಳಿಗೆ, ಸರ್ಕಾರದಿಂದ ಸಮರ್ಪಕ ಉತ್ತರಗಳು ದೊರಕಿವೆ ಎಂದು, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದ್ದಾರೆ. ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 64 ಗಂಟೆಗಳ ಕಾಲ ಸದನ ನಡೆದಿದೆ. ಮಹತ್ವದ 13 ವಿಧೇಯಕಗಳು ಅಂಗೀಕಾರಗೊಂಡಿವೆ. ಸಾವಿರದ 931 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಉತ್ತರ ಕರ್ನಾಟಕದ ಸಮಸ್ಯೆಗಳು ಮತ್ತು ಅಭಿವೃದ್ಧಿ ಕುರಿತು, ಮೂರು ದಿನಗಳ ಕಾಲ ವಿಶೇಷ ಚರ್ಚೆ ನಡೆದಿದೆ ಎಂದರು.

<><><>

ಮಹಾತ್ಮ ಗಾಂಧಿಯವರು, 1924 ರಲ್ಲಿ ಬೆಳಗಾವಿಯಲ್ಲಿ ನಡೆದ, ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷತೆ ವಹಿಸಿ, ಇದೇ 27ಕ್ಕೆ, 100 ವರ್ಷ ಪೂರ್ಣಗೊಳ್ಳಲಿದೆ. "ಗಾಂಧಿ ಭಾರತ" ಕಾರ್ಯಕ್ರಮದಡಿ, ಸಂಭ್ರಮಾಚರಣೆ ಹಿನ್ನೆಲೆ, ಮೈಸೂರು ದಸರಾ ಮಾದರಿಯಲ್ಲಿ, ಗಾಂಧೀಜಿ ಅವರು ಭೇಟಿ ನೀಡಿದ್ದ, ಬೆಳಗಾವಿಯ ಎಲ್ಲ ಐತಿಹಾಸಿಕ ಸ್ಥಳಗಳಿಗೆ, ವಿದ್ಯುತ್ ದೀಪಾಲಂಕಾರ ಮಾಡಲಾಗುವುದು ಎಂದು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಅಧ್ಯಕ್ಷ ಅಜೀಂಪೀರ್ ಖಾದ್ರಿ ಹಾವೇರಿಯಲ್ಲಿ ತಿಳಿಸಿದ್ದಾರೆ.

<><><>

ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಹುಬ್ಬಳ್ಳಿಯಲ್ಲಿ ಮಾತನಾಡಿ, ಬೆಳಗಾವಿಯ ಗಾಂಧಿ ಭಾರತ ಕಾರ್ಯಕ್ರಮಕ್ಕೆ, ಧಾರವಾಡ ಜಿಲ್ಲೆಯಿಂದ 25 ಸಾವಿರ ಜನ ಭಾಗವಹಿಸಲಿದ್ದಾರೆ, ಎಂದರು.

<><><>

ನಾಡೋಜ ಗೊ.ರು.ಚ ಅವರ ಸರ್ವಾಧ್ಯಕ್ಷತೆಯಲ್ಲಿ, ಮಂಡ್ಯದಲ್ಲಿ ಆಯೋಜಿತ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ, ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್, ಪ್ರಧಾನ ವೇದಿಕೆ ಹಾಗೂ ಎರಡು ಸಮಾನಾಂತರ ವೇದಿಕೆಗಳಲ್ಲಿ, ಇಂದು ಮತ್ತು ನಾಳೆ, 30 ವೈವಿಧ್ಯಮಯ ಗೋಷ್ಠಿಗಳು ನಡೆಯಲಿವೆ. 1974 ಮತ್ತು 1994ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಥಿತ್ಯವಹಿಸಿದ್ದ, ಮಂಡ್ಯ ನಗರ, 3ನೇ ಬಾರಿಗೆ 2024 ರಲ್ಲಿ ಆಥಿತ್ಯ ವಹಿಸಿರುವುದು ವಿಶೇಷ. ಸಮ್ಮೇಳನದ ಅಂಗವಾಗಿ 400ಕ್ಕೂ ಹೆಚ್ಚು ಪುಸ್ತಕ ಮಳಿಗೆಗಳನ್ನು ತೆರೆಯಲಾಗಿದೆ.

<><><>

ಆಕಾಶವಾಣಿಯ ಮಹಾ ನಿರ್ದೇಶಕರು, ಗಣರಾಜ್ಯೋತ್ಸವದ ಅಂಗವಾಗಿ, ಮುಂಬೈಯ ವಾಶಿಯಲ್ಲಿ ಆಯೋಜಿಸಿದ್ದ, 'ಸರ್ವಭಾಷಾ ಕವಿ ಸಮ್ಮೇಳನ'ದಲ್ಲಿ ಕನ್ನಡ ಭಾಷೆಯನ್ನು ಪ್ರತಿನಿಧಿಸಿ, 'ಕಲ್ಯಾಣದ ಹಾದಿ' ಶೀರ್ಷಿಕೆಯ ಕವನವನ್ನು, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಮೌಲ್ಯಮಾಪನ ಕುಲಸಚಿವ, ಡಾಕ್ಟರ್ ನಿಜಲಿಂಗಪ್ಪ ಮಟ್ಟಿಹಾಳ, ಪ್ರಸ್ತುತಪಡಿಸಿ, ಮೆಚ್ಚುಗೆ ಗಳಿಸಿದ್ದಾರೆ. ಧಾರವಾಡ ಆಕಾಶವಾಣಿಯನ್ನು ಪ್ರತಿನಿಧಿಸಿದ ಮೂರನೇ ಕವಿ ಎಂಬ ಹಿರಿಮೆಗೆ ಪಾತ್ರವಾಗಿರುವ ಅವರು, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ನಿಜಲಿಂಗಪ್ಪ ಮಟ್ಟಿಹಾಳ ಧ್ವನಿ 40 ಸೆಕೆಂದುಗಳು

<><><>

ನ್ಯಾಯಾಂಗದ ಮೇಲೆ ತಮಗೆ ಸಂಪೂರ್ಣ ವಿಶ್ವಾಸವಿದ್ದು, ಸತ್ಯಕ್ಕೆ ಅಂತಿಮವಾಗಿ ಜಯ ಸಿಕ್ಕಿದೆ ಎಂದು, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದ್ದಾರೆ. ಬೆಂಗಳೂರು ಹೈಕೋರ್ಟ್ ಪೀಠದಿಂದ, ತನಿಖಾಧಿಕಾರಿ ಕರೆದಾಗ ವಿಚಾರಣೆಗೆ ಹಾಜರಾಗಬೇಕು ಎಂಬ ಷರತ್ತಿನೊಂದಿಗೆ, ಜಾಮೀನು ಪಡೆದು, ಬಿಡುಗಡೆಗೊಂಡ ಹಿನ್ನೆಲೆ, ದಾವಣಗೆರೆಯಲ್ಲಿ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೊಡನೆ, ಸುದ್ದಿಗೋಷ್ಠಿ ನಡೆಸಿದರು.

<><><>

ಈಗ ಜಾಹಿರಾತು..

ನಂತರ ಪ್ರದೇಶ ಸಮಾಚಾರ, ಮುಂದುವರೆಯುವುದು..

(ದಿನದರ್ಶಿಕೆ 10 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಬೆಳಗಾವಿ ಜಿಲ್ಲೆ, ಅಥಣಿ ತಾಲೂಕು ತಂಗಡಿಯ, ಆನಿಖಿಂಡಿ ತೋಟದಲ್ಲಿ, ಇಂದು ಮತ್ತು ನಾಳೆ, ಗಾಂಧಿ ಗ್ರಾಮೀಣ ಗುರುಕುಲದ ವತಿಯಿಂದ, ಚಿಂತನ–ಮಂಥನ ಸಮಾವೇಶ ಆಯೋಜಿತವಾಗಿದೆ. ಗಾಂಧೀಜಿಯವರ ತತ್ವ ಚಿಂತನೆ ಕುರಿತು, 8 ಗೋಷ್ಠಿಗಳು ನಡೆಯಲಿವೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರದ ಅಧ್ಯಕ್ಷ, ಸಂಜೀವ ಕುಲಕರ್ಣಿ.

<><><>

ಸಂಜೀವ್ ಕುಲಕರ್ಣಿ ಧ್ವನಿ 38 ಸೆಕೆಂದುಗಳು

<><><>

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ, 'ರಾಷ್ಟ್ರಭಕ್ತಿ, ದೇಶದ ಶಕ್ತಿ' ಧ್ಯೇಯದೊಂದಿಗೆ, ಕಿತ್ತೂರು ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೊರೇಟ್, ಜನವರಿ 6 ರಿಂದ 10ರ ವರೆಗೆ, ಧಾರವಾಡದ ದಡ್ಡಿ ಕಮಲಾಪುರ ಗ್ರಾಮದಲ್ಲಿ ಆಯೋಜಿತವಾಗಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಮುಖ್ಯ ಆಯುಕ್ತ ಶ್ರೀಶೈಲ ಕರೀಕಟ್ಟಿ.

<><><>

ಶ್ರೀಶೈಲ ಕರೀಕಟ್ಟಿ ಧ್ವನಿ 40 ಸೆಕೆಂದುಗಳು

<><><>

ಕಲಬುರಗಿಯ ಸರ್ದಾರ ವಲ್ಲಭ ಭಾಯ್ ಪಟೇಲ್ ರಸ್ತೆಯ, ಎಸ್.ಎಂ.ಪಂಡಿತ್ ರಂಗಮಂದಿರದ ಎದುರು, ನಿರ್ಮಾಣಗೊಂಡಿರುವ, 371 ಹಾಸಿಗೆಗಳ ಜಯದೇವ ಹೃದ್ರೋಗ ಆಸ್ಪತ್ರೆ ಕಟ್ಟಡ, ನಾಳೆ ಭಾನುವಾರ ಉದ್ಘಾಟನೆಗೊಳ್ಳಲಿದೆ. ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ ಅವರ ಸಾರಥ್ಯದಲ್ಲಿ, ಕಲ್ಯಾಣ ಕರ್ನಾಟಕ ಭಾಗದ, ಕಲಬುರಗಿ, ಕೊಪ್ಪಳ, ಬೀದರ, ಯಾದಗಿರಿ, ಬಳ್ಳಾರಿ,

ರಾಯಚೂರು ಜಿಲ್ಲೆಯ ನಾಗರಿಕರಿಗೆ, ಅನುಕೂಲ ಕಲ್ಪಿಸಲು, 262 ಕೋಟಿ 20 ಲಕ್ಷ ರೂಪಾಯಿ ವೆಚ್ಚದಲ್ಲಿ, ಈ ಆಸ್ಪತ್ರೆ ಸಜ್ಜುಗೊಂಡಿದೆ.

<><><>

ವನವಾಸಿಗರ ಕರಕುಶಲ ವಸ್ತುಗಳು, ದೇಸಿ ಉಡುಪು, ಕೈಮಗ್ಗ ಸೀರೆಗಳು ಹಾಗೂ ಗುಡಿ ಕೈಗಾರಿಕೆ ಉತ್ಪನ್ನಗಳ ಮಾರಾಟ ಮಳಿಗೆ, 'ಗುಡಿ ಎಂಪೋರಿಯಮ್' ನಾಳೆ ಬೆಳಗ್ಗೆ 10 ಗಂಟೆಗೆ, ಶಿವಮೊಗ್ಗದ ಗೋಪಾಲಗೌಡ ಬಡಾವಣೆಯಲ್ಲಿ ಉದ್ಘಾಟನೆಗೊಳ್ಳಲಿದೆ. ಹಿರಿಯ ರಂಗಕರ್ಮಿ ಇಕ್ಬಾಲ್ ಅಹಮ್ಮದ್ ಶಿವಮೊಗ್ಗದಲ್ಲಿ ಸುದ್ದಿಗೋಷ್ಠಿ ನಡೆಸಿ, ದೇಶದ ಎಲ್ಲ ರಾಜ್ಯಗಳ ಕಲಾಕೃತಿಗಳನ್ನು ಒಂದೇ ಸೂರಿನಡಿ ತಂದು, ಮಲೆನಾಡಿಗರಿಗೆ ಪರಿಚಯಿಸುವುದು ಮತ್ತು ಮಾರಾಟದ ಮೂಲಕ, ಕುಶಲಕರ್ಮಿಗಳಿಗೆ ನೆರವಾಗುವ ಉದ್ದೇಶದಿಂದ, ಗುಡಿ ಎಂಪೋರಿಯಮ್ ಸ್ಥಾಪಿಸಲಾಗಿದೆ ಎಂದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ದಕ್ಷಿಣ ಭಾರತದ ಏಕೈಕ ಐಷಾರಾಮಿ ರೈಲು, ದಿ ಗೋಲ್ಡನ್ ಚಾರಿಯೇಟ್‌ಗೆ, ಇಂದು ಬೆಳಗ್ಗೆ 9.30ಕ್ಕೆ, ಬೆಂಗಳೂರಿನ ಯಶವಂತಪುರ ರೈಲು ನಿಲ್ದಾಣದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡುವರು.

<><><>

ಶಿವಮೊಗ್ಗ ಜಿಲ್ಲೆ, ಭದ್ರಾವತಿಯ ಗಣೇಶ ರೈಸ್ ಮಿಲ್‌ನಲ್ಲಿ ಬಾಯ್ಲರ್ ಸ್ಫೋಟಗೊಂಡ ಹಿನ್ನೆಲೆ, ಓರ್ವರು ಮೃತಪಟ್ಟು, ಏಳಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿವೆ.

<><><>

ಮಂಗಳೂರಿನಲ್ಲಿ ಕರಾವಳಿ ಉತ್ಸವ, ಇಂದಿನಿಂದ ಜನವರಿ 19ರ ವರೆಗೆ, ಆಯೋಜಿಸಲಾಗಿದೆ ಎಂದು, ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ ತಿಳಿಸಿದ್ದಾರೆ.

<><><>

ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ, ಉದ್ಯಾನಗಿರಿಯ ಮುಖ್ಯ ಆವರಣದಲ್ಲಿ, ಇಂದಿನಿಂದ ಮೂರು ದಿನಗಳ ವರೆಗೆ, ತೋಟಗಾರಿಕೆ ಮೇಳ ಆಯೋಜಿತವಾಗಿದೆ.

<><><>

'ವಿಧಾನ್ ಸೆ ಸಮಾಧಾನ್' ಕಾನೂನು ಅರಿವು ಕಾರ್ಯಕ್ರಮವನ್ನು, ರಾಮನಗರ ಜಿಲ್ಲಾಧಿಕಾರಿ ಯಶವಂತ ಗುರುಕರ, ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಉದ್ಘಾಟಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಬೆಳಗಾವಿಯ ಚಳಿಗಾಲದ ಅಧಿವೇಶನ, ಜನಪರವಾಗಿ ಯಶಸ್ವಿ – ವಿಧಾನಸಭಾಧ್ಯಕ್ಷ, ಯು.ಟಿ. ಖಾದರ್, ಅಭಿಮತ.

- ಬೆಳಗಾವಿ ಕಾಂಗ್ರೆಸ್ ಮಹಾಧಿವೇಶನದ ಶತಮಾನೋತ್ಸವ; 27ನೇ ತಾರೀಖು, ಸಂಭ್ರಮದ "ಗಾಂಧಿ ಭಾರತ" ಕಾರ್ಯಕ್ರಮ.

- ಗಾಂಧಿ ಗ್ರಾಮೀಣ ಗುರುಕುಲದಿಂದ, ಅಥಣಿಯ ಆನಿಖಿಂಡಿಯಲ್ಲಿ, ಇಂದು ಮತ್ತು ನಾಳೆ, ಗಾಂಧಿ ಚಿಂತನ ಸಮಾವೇಶ.

- ಕಿತ್ತೂರು ಕರ್ನಾಟಕ, ಸ್ಕೌಟ್ಸ್ ಮತ್ತು ಗೈಡ್ಸ್, ಐದು ದಿನಗಳ ಜಾಂಬೊರೇಟ್, ಧಾರವಾಡದಲ್ಲಿ ಆಯೋಜನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ